**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 137/2020**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀಕಾಂತ್ | ಪ್ರಮಾಣ ಮಾಡಿದ ದಿನಾಂಕ: |
| ತಂದೆ ಹೆಸರು | : ಕೆಂಪೇಗೌಡ | 17.11.2021 |
| ವಯಸ್ಸು | : 21 ವರ್ಷ | |
| ವೃತ್ತಿ | : ವಿದ್ಯಾರ್ಥಿ | ಪಿಡಬ್ಲ್ಯೂ : 04 |
| ವಾಸ ಸ್ಥಳ | : ಮೈಸೂರು | ಸಿಡಬ್ಲ್ಯೂ : 03 |

*ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:*

**ನನಗೆ ಚಾಸಾ-1 ಮತ್ತು 2ರವರ ಪರಿಚಯ ಇದೆ. ಚಾಸಾ-1ರವರು ನಮ್ಮ ಓಂಕಾರೇಶ್ವರ ಕಾರ್ ಶೋರೂಂ ಪಕ್ಕ ವಾಸ ಇದ್ದಾರೆ. ನಾನು ಸದರಿ ಶೋರೊಂನಲ್ಲಿ ಕೆಲಸ ಮಾಡುತ್ತೇನೆ. ದಿನಾಂಕ 21.08.2019ರಂದು ಚಾಸಾ-1ರವರ ತಾಯಿಗೆ ಸೇರಿದ ಏಳು ಚಿನ್ನದ ಬಳೆಗಳನ್ನು ಯಾರೋ ಒಬ್ಬ ವ್ಯಕ್ತಿ ಮನೆಯ ಒಳಗೆ ಹೋಗಿ ಅವರ ತಾಯಿಯ ಬಾಯಿಗೆ ಬಟ್ಟೆಯನ್ನು ತುರುಕಿ ಕಳ್ಳತನ ಮಾಡಿದ್ದ ಬಗ್ಗೆ ವಿಚಾರ ತಿಳಿಯಿತು. ಅದೇ ದಿನ ಚಾಸಾ-1ರವರ ಮನೆಯ ಬಳಿ ಬೆಳಿಗ್ಗೆ 9/9:30 ಗಂಟೆ ಸಮಯದಲ್ಲಿ ಪೊಲೀಸರು ಒಂದು ಮಹಜರ ಮಾಡಿದ್ದು ಅದಕ್ಕೆ ನನ್ನ ರುಜು ಪಡೆದಿರುತ್ತಾರೆ. ಮಹಜರನಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ಅದನ್ನು ನಿಪಿ-5(ಬಿ) ಎಂದು ಗುರುತಿಸಿದೆ. ಚಾಸಾ-2 ಸಹ ನನ್ನ ಜೊತೆ ರುಜು ಮಾಡಿರುತ್ತಾರೆ. ಚಾಸಾ-1 ಮತ್ತು ಅವರ ತಾಯಿ ಸಹ ಮಹಜರ ಸಮಯದಲ್ಲಿ ಹಾಜರಿದ್ದರು. ಮಹಜರನ್ನು ಸುಮಾರು ಒಂದು ಗಂಟೆಗಳ ಕಾಲ ಬರೆದರು. ಸ್ಥಳದಲ್ಲಿ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿಗೆ ಮು.ಮಾ-1ರ ಅಂಡರವೀಯರ್ ತೋರಿಸಲಾಗಿ, ಅದನ್ನು ನಾನು ಈ ಹಿಂದೆ ನೋಡಿಲ್ಲ ಎಂದು ತಿಳಿಸಿರುತ್ತಾರೆ.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

**2. ಮು.ಮಾ-1ರಲ್ಲಿ ಇರುವ ಒಂದು ಅಂಡರವೀಯರ್‌ನ್ನು ಪೊಲೀಸರು ಮಹಜರ ಸಮಯದಲ್ಲಿ ತೆಗೆದುಕೊಂಡು ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಿದ್ದರು ಎಂದರೆ ಸರಿ. ಇದೇ ಬಟ್ಟೆಯನ್ನು ಚಾಸಾ-1ರವರ ತಾಯಿಯ ಬಾಯಿಗೆ ತುರುಕಿ ಕಳ್ಳತನ ಮಾಡಲಾಗಿತ್ತು ಎನ್ನುವುದನ್ನು ಚಾಸಾ-1 ತಿಳಿಸಿದ್ದರು ಎಂದರೆ ಸರಿ. ನಾನು ಆ ದಿನ ಮನೆಯ ಒಳಗಡೆ ಹೋಗಿರಲಿಲ್ಲ. ಆದ್ದರಿಂದ ಅಲ್ಲಿ ಬಟ್ಟೆಯನ್ನು ತೆಗೆದುಕೊಂಡಿದ್ದುದು ನನಗೆ ಗೊತ್ತಿರಲಿಲ್ಲ. ನಂತರ ಹೊರಗಡೆ ಮು.ಮಾ-1ನ್ನು ತೋರಿಸಿದ್ದರು.**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಎಲ್.ರವರಿಂದಃ-**

**3. ನಾನು ಕಾರ್ ಶೋರೂಂನಲ್ಲಿ ಮಹಜರ ಸಮಯಕ್ಕೆ ಒಂದೂವರೆ ವರ್ಷಗಳ ಹಿಂದಿನಿಂದ ಕೆಲಸ ಮಾಡುತ್ತಿದ್ದೆ. ನಾನು ಕೆಲಸಕ್ಕೆ ಸೇರಿದ ದಿನದಿಂದ ಚಾಸಾ-1ರವರ ಪರಿಚಯ ಇತ್ತು. ಚಾಸಾ-1ರವರ ಗಂಡ ನನಗೆ ಪರಿಚಯ ಇಲ್ಲ. ನಿಪಿ-9ರಲ್ಲಿ ನನ್ನ ಹಾಗೂ ಪ್ರಾಸಾ-3ರವರ ಭಾವಚಿತ್ರ ಇಲ್ಲ ಎಂದರೆ ಸರಿ. ಇದರಲ್ಲಿ ಚಾಸಾ-1ರವರ ಗಂಡ ಫೋಟೋ ಸಹ ಇಲ್ಲ ಎಂದರೆ ಸರಿ. ನಾನು ಚಾಸಾ-1ರವರ ಗಂಡನನ್ನು ನೋಡಿಲ್ಲ. ಚಾಸಾ-1ರವರ ಮನೆಯಲ್ಲಿ ಕಳ್ಳತನ ಆಗಿರುವ ಬಗ್ಗೆ ನನಗೆ ಪೊಲೀಸರು ತಿಳಿಸಿರುತ್ತಾರೆ. ಆಗ ನಾನು ಚಾಸಾ-1ರವರ ಮನೆಯ ಹೊರಗಡೆ ನಿಂತಿದ್ದೆ. ಆಗ ಪೊಲೀಸರು ಸ್ಥಳ ಮಹಜರ ಮಾಡಿರುವುದಾಗಿ ಹೇಳಿ ರುಜು ಪಡೆದಿರುತ್ತಾರೆ. ಸ್ಥಳ ಮಹಜರ ಸಮಯದಲ್ಲಿ ಫೋಟೋ ಯಾರು ತಗೆದಿದ್ದರು ಎನ್ನುವುದು ಗೊತ್ತಿಲ್ಲ.**

**4. ಮು.ಮಾ-1ರ ಬಟ್ಟೆಯನ್ನು ಪೊಲೀಸರು ನನಗೆ ಮನೆಯ ಹೊರಗಡೆ ತಂದು ತೋರಿಸಿದ್ದರು. ಇದನುನ ಪೊಲೀಸರಿಗೆ ಯಾರು ಕೊಟ್ಟಿದ್ದರು ಅಂತ ಗೊತ್ತಿಲ್ಲ. ಬಟ್ಟೆಯನ್ನು ತೋರಿಸಿದ ನಂತರ ಅದನ್ನು ಪೊಲೀಸರೇ ತೆಗೆದುಕೊಂಡು ಹೋಗಿರುತ್ತಾರೆ. ಮಹಜರನಲ್ಲಿ ರುಜುವನ್ನು ನಾನು ಮನೆಯ ಹೊರಗಡೆ ಇದ್ದಾಗ ಮಾಡಿರುತ್ತೇನೆ. ಆಗ ನನ್ನ ಜೊತೆ ಪ್ರಾಸಾ-3 ರವರು ಕೂಡ ಹಾಜರಿದ್ದರು. ಪೊಲೀಸರು ಮನೆಯ ಒಳಗಡೆ ಏನು ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಾನು ಮಹಜರ ಸಮಯದಲ್ಲಿ ಹಾಜರಿರಲಿಲ್ಲ ಎನ್ನುವುದು, ಮಹಜರಗೆ**

ಪೊಲೀಸ ಠಾಣೆಯಲ್ಲಿ ರುಜು ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಪ್ರಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1ರವರ ಮನೆಯಲ್ಲಿ ಬಳೆಗಳನ್ನು ಕಳ್ಳತನ ಆಗಿತ್ತು ಎನ್ನುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- - ಇಲ್ಲ -

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**17.11.2021.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.